# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 1970 (2199) |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಎಂ. ನಾಗರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸುವ ದಿನಾಂಕ** | : | 26.03.2026 |
| **ಉತ್ತರಿಸುವ ಸಚಿವರು** | : | ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಹಳ್ಳಿ ಪ್ರವಾಸೋದ್ಯಮ (Village Tourism / Agri Tourism) ಇನ್ನೂ ಪರಿಣಾಮಕಾರಿಯಾಗಿ ಅಭಿವೃದ್ಧಿ ಪಡಿಸಲು ರಾಜ್ಯ ಸರ್ಕಾರವು ಸ್ವತಂತ್ರ್ಯ ಅಥವಾ ಸಾರ್ವಜನಿಕ - ಖಾಸಗಿ ಪಾಲುದಾರಿಕೆ ರೂಪದಲ್ಲಿ ಯಾವ ಕ್ರಮಗಳನ್ನು ಕೈಗೊಂಡಿದೆ; ಈ ಯೋಜನೆಯಿಂದ ಸ್ಥಳೀಯ ಜನರಿಗೆ ಉದ್ಯೋಗ ಸೃಷ್ಟಿಯಾಗಿದೆಯೇ; | ಹಳ್ಳಿ ಪ್ರವಾಸೋದ್ಯಮ / ಕೃಷಿ ಪ್ರವಾಸೋದ್ಯಮ (Village Tourism / Agri-Tourism) ವನ್ನು ಪರಿಣಾಮಕಾರಿಯಾಗಿ ಅಭಿವೃದ್ಧಿಪಡಿಸಲು ಕರ್ನಾಟಕ ಸರ್ಕಾರವು ಹಲವು ನೀತಿಗಳು, ಯೋಜನೆಗಳು ಮತ್ತು ಸಾರ್ವಜನಿಕ-ಖಾಸಗಿ ಪಾಲುದಾರಿಕೆ (PPP) ಕ್ರಮಗಳನ್ನು ಕೈಗೊಂಡಿದೆ. ಅದರ ಮುಖ್ಯ ಅಂಶಗಳು ಕೆಳಕಂಡಂತಿವೆ:<br><br>1. **<u>ಪ್ರವಾಸೋದ್ಯಮ ನೀತಿಯಲ್ಲಿ ಗ್ರಾಮೀಣ ಮತ್ತು ಕೃಷಿ ಪ್ರವಾಸೋದ್ಯಮಕ್ಕೆ ಆದ್ಯತೆ:</u>**<br>ಕರ್ನಾಟಕ ಪ್ರವಾಸೋದ್ಯಮ ನೀತಿ 2024-29 ರಲ್ಲಿ **Agri Tourism ಮತ್ತು Rural Tourism** ಅನ್ನು ಪ್ರಮುಖ ವಿಷಯವಾಗಿ ಘೋಷಿಸಲಾಗಿದೆ. ಇದರ ಉದ್ದೇಶ ಗ್ರಾಮೀಣ ಜೀವನಶೈಲಿ, ಸ್ಥಳೀಯ ಆಹಾರ, ಕಲೆ, ಸಂಸ್ಕೃತಿ ಮತ್ತು ಕೃಷಿ ಚಟುವಟಿಕೆಗಳನ್ನು ಪ್ರವಾಸಿಗರಿಗೆ ಪರಿಚಯಿಸುವುದು.<br><br>2. **<u>ಸಾರ್ವಜನಿಕ-ಖಾಸಗಿ ಪಾಲುದಾರಿಕೆ (PPP) ಮೂಲಕ ಅಭಿವೃದ್ಧಿ:</u>** ರಾಜ್ಯ ಸರ್ಕಾರವು ಕೆಳಗಿನ ರೀತಿಯಲ್ಲಿ PPP ಮಾದರಿಯನ್ನು ಉತ್ತೇಜಿಸಿದೆ:<br>• ರೈತರು, ರೈತ ಉತ್ಪಾದಕರ ಸಂಘಗಳು (FPO), ಸಹಕಾರ ಸಂಘಗಳು ಹಾಗೂ ಖಾಸಗಿ ಹೂಡಿಕೆದಾರರು **Agri-Tourism ಯೋಜನೆಗಳನ್ನು ಸ್ಥಾಪಿಸಲು ಅವಕಾಶ**<br>• ಖಾಸಗಿ ಹೂಡಿಕೆಯನ್ನು ಆಕರ್ಷಿಸಲು **ಹೂಡಿಕೆ ಪ್ರೋತ್ಸಾಹ, ತೆರಿಗೆ ಸಡಿಲಿಕೆ ಮತ್ತು ವಿವಿಧ ಸಬ್ಸಿಡಿಗಳು**.<br><br>3. **<u>ಹಣಕಾಸು ಪ್ರೋತ್ಸಾಹ ಮತ್ತು ಸಬ್ಸಿಡಿಗಳು:</u>**<br>ರಾಜ್ಯ ಸರ್ಕಾರವು ಪ್ರವಾಸೋದ್ಯಮ ಯೋಜನೆಗಳಿಗೆ ಕೆಲವು ಆರ್ಥಿಕ ಪ್ರೋತ್ಸಾಹಗಳನ್ನು ಒದಗಿಸುತ್ತದೆ:<br>• ಟರ್ಮ್ ಲೋನ್ ಮೇಲೆ **ಸುಮಾರು 5% ಬಡ್ಡಿದರ ಸಬ್ಸಿಡಿ** (ಗರಿಷ್ಠ ₹25 ಲಕ್ಷವರೆಗೆ).<br>• ಗ್ರಾಮೀಣ/ಕೃಷಿ ಪ್ರವಾಸೋದ್ಯಮ ಯೋಜನೆಗಳಿಗೆ **ಹೂಡಿಕೆ ಪ್ರೋತ್ಸಾಹ ಮತ್ತು ಮೂಲಸೌಕರ್ಯ ಬೆಂಬಲ**<br><br>4. **<u>ಕೃಷಿ ಪ್ರವಾಸೋದ್ಯಮ ಕೇಂದ್ರಗಳ ಸ್ಥಾಪನೆ:</u>**<br>• ಕನಿಷ್ಠ **5 ಎಕರೆ ಕೃಷಿ ಭೂಮಿ** ಇರುವ ರೈತರು ಅಥವಾ ರೈತ ಸಂಘಗಳು Agri-Tourism ಯೋಜನೆ ಆರಂಭಿಸಬಹುದು.<br>• ಪ್ರವಾಸಿಗರಿಗೆ **ಹಾಲು ಉತ್ಪಾದನೆ, ಜೇನು ಸಾಕಾಣಿಕೆ, ರೇಷ್ಮೆ ಸಾಕಣೆ, ಹಣ್ಣು-ತರಕಾರಿ ಕಟಾವು, ಕೃಷಿ ಅನುಭವ ಚಟುವಟಿಕೆಗಳು** ಮುಂತಾದ ಅನುಭವಾತ್ಮಕ ಕಾರ್ಯಕ್ರಮಗಳು ಒದಗಿಸಲಾಗುತ್ತದೆ.<br><br>5. **<u>ಸ್ಥಳೀಯ ಜನರಿಗೆ ಉದ್ಯೋಗ ಮತ್ತು ಆದಾಯ</u>**<br>ಈ ಯೋಜನೆಗಳಿಂದ ಗ್ರಾಮೀಣ ಪ್ರದೇಶಗಳಲ್ಲಿ:<br>• ಹೋಂಸ್ಟೇ, ಫಾರ್ಮ್ ಸ್ಟೇ, ಕೈಗಾರಿಕೆ, ಕೃಷಿ ಉತ್ಪನ್ನ ಮಾರಾಟ, ಸಾಂಸ್ಕೃತಿಕ ಕಾರ್ಯಕ್ರಮಗಳು ಮುಂತಾದವುಗಳಿಂದ ಪ್ರತ್ಯಕ್ಷ ಹಾಗೂ ಪರೋಕ್ಷ ಉದ್ಯೋಗ ಮತ್ತು ಹೆಚ್ಚುವರಿ ಆದಾಯ ಸೃಷ್ಟಿಯಾಗುತ್ತದೆ. |

| | | |
|---|---|---|
| ಆ) | ಪರಿಸರ ಸಂರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಪ್ರವಾಸೋದ್ಯಮವನ್ನು ಉತ್ತೇಜಿಸಲು ರಾಜ್ಯದಲ್ಲಿ ಯಾವ ನೀತಿಗಳನ್ನು ಜಾರಿಗೆ ತರಲಾಗಿದೆ; ವಿಶೇಷವಾಗಿ ನೀರಾವರಿ ಪ್ರದೇಶಗಳು, ಹಸಿರು ವಲಯಗಳು ಮತ್ತು ಪರ್ವತ ಪ್ರದೇಶಗಳ ಪ್ರವಾಸೋದ್ಯಮದಲ್ಲಿ ಪರಿಸರ ಹಾನಿ ತಪ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು; | ಕರ್ನಾಟಕದ ವೈವಿಧ್ಯಮಯ ಪರಿಸರ ವ್ಯವಸ್ಥೆಗಳು, ಕರಾವಳಿ ಪ್ರದೇಶಗಳಿಂದ ಹಿಡಿದು ಅರಣ್ಯ ಭೂದೃಶ್ಯಗಳ ವರೆಗೆ, ಅನನ್ಯ ಪರಿಸರ ತಾಣಗಳವರೆಗೆ, ಪರಿಸರ ಸ್ನೇಹಿ ಪ್ರವಾಸೋದ್ಯಮ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಅಪಾರ ಅವಕಾಶಗಳನ್ನು ಒದಗಿಸಲಿದ್ದು, ಕರ್ನಾಟಕ ಸರ್ಕಾರವು ಪ್ರವಾಸೋದ್ಯಮದ ಬೆಳವಣಿಗೆಗೆ ಅನುಕೂಲ ಕಲ್ಪಿಸುವ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸುತ್ತದೆ ಮತ್ತು ನೈಸರ್ಗಿಕ ಸಂಪತ್ತನ್ನು ಸಂರಕ್ಷಿಸುವ ಮತ್ತು ಸ್ಥಳೀಯ ಸಮುದಾಯಗಳನ್ನು ಸಬಲೀಕರಣಗೊಳಿಸುವ ಜವಾಬ್ದಾರಿಯುತ ಪ್ರವಾಸೋದ್ಯಮ ಪದ್ಧತಿಗಳಿಗಾಗಿ ಸಾರ್ವಜನಿಕ, ಖಾಸಗಿ ಮತ್ತು ಸ್ಥಳೀಯ ಹಿತಾಸಕ್ತಿದಾರರ ನಡುವೆ ಸಮನ್ವಯವನ್ನು ಸಾಧಿಸಲಾಗುತ್ತಿದೆ.<br><br>ಪರಿಸರ ಸಂರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಪ್ರವಾಸೋದ್ಯಮವನ್ನು ಉತ್ತೇಜಿಸಲು ಕೈಗೊಳ್ಳುತ್ತಿರುವ ಕ್ರಮಗಳನ್ನು ಪ್ರಸ್ತುತ ಜಾರಿಯಲ್ಲಿರುವ ಕರ್ನಾಟಕ ಪ್ರವಾಸೋದ್ಯಮ ನೀತಿ-2024-29ರನ್ವಯ ಪ್ರಮುಖ ಅಂಶಗಳನ್ನು **ಅನುಬಂಧ-1ರಲ್ಲಿ** ಒದಗಿಸಿದೆ. |
| ಇ) | ರಾಜ್ಯದಲ್ಲಿ ಐತಿಹಾಸಿಕ, ಧಾರ್ಮಿಕ ಮತ್ತು ಹೆರಿಟೇಜ್ ಸ್ಥಳಗಳ ಸಂರಕ್ಷಣೆಗಾಗಿ ಇಲಾಖೆ ಪ್ರತಿ ವರ್ಷ ಎಷ್ಟು ಅನುದಾನ ಮೀಸಲಿಡುತ್ತದೆ? ಮಾಹಿತಿ ನೀಡುವುದು: | ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ವತಿಯಿಂದ ಸ್ಮಾರಕಗಳ ಸಂರಕ್ಷಣೆಯಾಗುತ್ತಿದ್ದು, ಸಂರಕ್ಷಣೆಗೆ ಒಳಪಡುವ ಎಲ್ಲಾ ಸ್ಮಾರಕಗಳು ಐತಿಹಾಸಿಕ ಮತ್ತು ಪಾರಂಪರಿಕ ಸ್ಥಳವಾಗಿರುತ್ತದೆ ಮತ್ತು ಇಲಾಖೆಯ ವತಿಯಿಂದ ಅರಿವು/ ಉತ್ಖನನ ಹಾಗೂ ಇತರೆ ಪಾರಂಪರಿಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಇಲಾಖೆಯ 16 ವಸ್ತುಸಂಗ್ರಹಾಲಯಗಳ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ. ಇದಕ್ಕಾಗಿ 2024-25ನೇ ಸಾಲಿನಲ್ಲಿ ರೂ.48.00 ಕೋಟಿಗಳು ಮತ್ತು 2025-26ನೇ ಸಾಲಿನ ಆಯವ್ಯಯದಲ್ಲಿ ರೂ.70.00 ಕೋಟಿಗಳ ಅನುದಾನವನ್ನು ಮೀಸಲಿಡಲಾಗಿದೆ.<br><br>2026-27ನೇ ಸಾಲಿನ ಆಯವ್ಯಯದಲ್ಲಿ ರೂ.70.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ. |

**TOR 121 TDV 2026**

(ಎಚ್.ಕೆ. ಪಾಟೀಲ)
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಡಹಾಗೂ ಪ್ರವಾಸೋದ್ಯಮ ಸಚಿವರು.

# ಅನುಬಂಧ - 1

ಕರ್ನಾಟಕದ ವೈವಿಧ್ಯಮಯ ಪರಿಸರ ವ್ಯವಸ್ಥೆಗಳು, ಕರಾವಳಿ ಪ್ರದೇಶಗಳಿಂದ ಹಿಡಿದು ಅರಣ್ಯ ಭೂದೃಶ್ಯಗಳ ವರೆಗೆ, ಅನನ್ಯ ಪರಿಸರ ತಾಣಗಳವರೆಗೆ, ಪರಿಸರ ಸ್ನೇಹಿ ಪ್ರವಾಸೋದ್ಯಮ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತ ಅಪಾರ ಅವಕಾಶಗಳನ್ನು ಒದಗಿಸುತ್ತಿದ್ದು, ಕರ್ನಾಟಕ ಸರ್ಕಾರವು ಪ್ರವಾಸೋದ್ಯಮದ ಬೆಳವಣಿಗೆಗೆ ಅನುಕೂಲ ಕಲ್ಪಿಸುವ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸುತ್ತದೆ ಮತ್ತು ನೈಸರ್ಗಿಕ ಸಂಪತ್ತನ್ನು ಸಂರಕ್ಷಿಸುವ ಮತ್ತು ಸ್ಥಳೀಯ ಸಮುದಾಯಗಳನ್ನು ಸಬಲೀಕರಣಗೊಳಿಸುವ ಜವಬ್ದಾರಿಯುತ ಪ್ರವಾಸೋದ್ಯಮ ಪದ್ಧತಿಗಳಿಗಾಗಿ ಸಾರ್ವಜನಿಕ, ಖಾಸಗಿ ಮತ್ತು ಸ್ಥಳೀಯ ಹಿತಾಸಕ್ತಿದಾರರ ನಡುವೆ ಸಮನ್ವಯವನ್ನು ಸಾಧಿಸಲಾಗುತ್ತದೆ. ಅದರ ಮುಖ್ಯ ಅಂಶಗಳು ಈ ಕೆಳಕಂಡಂತಿವೆ;

1. <u>ಮಾರ್ಗಸೂಚಿಗಳು, ನೀತಿಗಳು ಮತ್ತು ಉತ್ತಮ ಪದ್ಧತಿಗಳಿಗೆ ಬದ್ಧವಾಗಿರುವುದು;</u>
   ಪ್ರವಾಸಿ ತಾಣದ ನಿರ್ವಹಣಾ ಸಾಮರ್ಥ್ಯವನ್ನು ಎಚ್ಚರಿಕೆಯಿಂದ ಪರಿಗಣಿಸಿದ ತರುವಾಯ ಮತ್ತು ಕರ್ನಾಟಕ ಸರ್ಕಾರ, ಭಾರತ ಸರ್ಕಾರ ಮತ್ತು ಅನ್ವಯವಾಗಬಹುದಾದ ಸಂಬಂಧಪಟ್ಟ ಪ್ರಾಧಿಕಾರಗಳು ಹೊರಡಿಸಿದ ನೀತಿಗಳು, ಆದೇಶಗಳು ಮತ್ತು ಮಾರ್ಗಸೂಚಿಗಳನ್ನು ಪಾಲಿಸಿ ಪರಿಸರ ಪ್ರವಾಸೋದ್ಯಮದ ಅಭಿವೃದ್ಧಿ ಮತ್ತು ಪ್ರಚಾರವನ್ನು ಮಾಡಲಾಗುತ್ತದೆ.

2. <u>ಸಂರಕ್ಷಣೆ, ಜಾಗೃತಿ ಮತ್ತು ಸುಸ್ಥಿರತೆಯ ಬಗ್ಗೆ ಗಮನಹರಿಸುವುದು;</u>
   ಪರಿಸರ ಪ್ರವಾಸೋದ್ಯಮ ಕಾರ್ಯಚಟುವಟಿಕೆಗಳು ಜೀವವೈವಿಧ್ಯತೆ ಮತ್ತು ನೈಸರ್ಗಿಕ ಪರಿಸರದ ಸಂರಕ್ಷಣೆ ಮತ್ತು ಸುಸ್ಥಿರತೆಯ ಬಗ್ಗೆ ಜಾಗೃತಿ ಮೂಡಿಸುವತ್ತ ಗಮನಹರಿಸುತ್ತದೆ. ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮತ್ತು ಪ್ರಚಾರವನ್ನು ಸುಸ್ಥಿರ ಮತ್ತು ಜವಬ್ದಾರಿಯುತ ಪ್ರವಾಸೋದ್ಯಮದ ಮೇಲೆ ಗಮನಹರಿಸುವುದರೊಂದಿಗೆ ಮಾಡಲಾಗುತ್ತದೆ. ಆ ಮೂಲಕ ಕರ್ನಾಟಕ ವೈವಿಧ್ಯಮಯ ಪರಿಸರ ವ್ಯವಸ್ಥೆಗಳು ಮತ್ತು ಶ್ರೀಮಂತ ನೈಸರ್ಗಿಕ ಪರಂಪರೆಯನ್ನು ಪ್ರದರ್ಶಿಸುವಾಗ ಜಾಗೃತಿ ಮತ್ತು ಸಂರಕ್ಷಣೆಗೆ ಒತ್ತು ನೀಡಲಾಗುತ್ತದೆ.

3. <u>ಪರಿಸರ ಸ್ನೇಹಿ ವಸತಿ ಸೌಲಭ್ಯಕ್ಕೆ ಉತ್ತೇಜನ;</u>
   ಕರ್ನಾಟಕ ಪ್ರವಾಸೋದ್ಯಮವು ಟೆಂಟ್ ವಸತಿ, ಶಿಬಿರ ತಾಣಗಳು, ಕ್ಯಾರವಾನ್ ಪಾರ್ಕ್‌ಗಳು ಮುಂತಾದ ಪರಿಸರ-ಸೂಕ್ಷ್ಮ ಪ್ರದೇಶಗಳಲ್ಲಿ ಕಡಿಮ ಪರಿಣಾಮದ ಮತ್ತು ಪರಿಸರ ಸ್ನೇಹಿ ವಸತಿ ಸೌಲಭ್ಯಗಳ ಅಭಿವೃದ್ಧಿಯನ್ನು ಉತ್ತೇಜಿಸಲು ಪ್ರಯತ್ನಿಸುತ್ತದೆ. ಪರಿಸರ ಪ್ರವಾಸೋದ್ಯಮಕ್ಕಾಗಿ ಹೆಚ್ಚಿನ ಖಾಸಗಿ ವಲಯದ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಪಿಪಿಪಿ ಯೋಜನೆಗಳಿಗೆ ಅನುಕೂಲವಾಗುವಂತೆ ಪ್ರಯತ್ನಗಳನ್ನು ಸಹ ಮಾಡುತ್ತದೆ.

4. <u>ನಗರ ಹಸಿರು ಸ್ಥಳಗಳು;</u>
   ಪರಿಸರ ಪ್ರವಾಸೋದ್ಯಮವು ಆಕರ್ಷಣೀಯ ಪ್ರವಾಸೋದ್ಯಮ ಕೊಡುಗೆಯಾಗಿ ನಗರ ಹಸಿರು ತಾಣಗಳ ಅಭಿವೃದ್ಧಿ ಮತ್ತು ಪ್ರಚಾರವನ್ನು ಸಹ ಒಳಗೊಂಡಿದ್ದು, ಈ ಸ್ಥಳಗಳು ಯೋಗ ಜ್ಞಾನಕೇಂದ್ರಗಳು, ಪ್ರಕೃತಿ ನಡಿಗೆಗಳು, ಆಹಾರ, ಸಂಸ್ಕೃತಿ ಮತ್ತು ಕಲಾ ಅನುಭವಗಳಂತಹ ಪರಿಸರ ಸ್ನೇಹಿ ಕಡಿಮೆ ಪರಿಣಾಮದ ಕಾರ್ಯಚಟುವಟಿಕೆಗಳನ್ನು ಸಹ ಆಯೋಜಿಸಲಾಗುತ್ತಿದೆ.

5. <u>ಕಡಲ ಸಫಾರಿಗಳು;</u>
   ಭೂ-ಸಸ್ಯೋದ್ಯಾನಗಳ ವನ್ಯಜೀವಿ ಸಫಾರಿಗಳ ಪರಿಕಲ್ಪನೆಯಂತೆಯೇ, ಕಡಲ ಸಫಾರಿಗಳನ್ನೂ ಸಹ ಅನ್ವೇಷಿಸಲಾಗುತ್ತದೆ. ಈ ಸಫಾರಿಗಳು ಪ್ರವಾಸಿಗರಿಗೆ ಕರ್ನಾಟಕದ ಕಡಲು ಜೀವವೈವಿಧ್ಯತೆಯನ್ನು ಅನ್ವೇಷಿಸುವ ಅವಕಾಶವನ್ನು ಒದಗಿಸಲಿದ್ದು, ದೃಶ್ಯವೀಕ್ಷಣೆ ಮತ್ತು ಕಡಲ ಸಂರಕ್ಷಣೆಯ ಮೇಲೆ ಕೇಂದ್ರೀಕರಿಸುವ ಮಾರ್ಗದರ್ಶಿ ಪ್ರವಾಸಗಳನ್ನು ಒದಗಿಸುತ್ತವೆ.

******